**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ ಉಡುಪಿ**

**ಸ್ಪೆಷಲ್ ಕೇಸ್ ನಂಃ** 58/2021 ಪಿ.ಡಬ್ಲ್ಯುಃ 8
ಸಿ.ಡಬ್ಲ್ಯುಃ 16

| | |
|---|---|
| ಸಾಕ್ಷಿದಾರರ ಹೆಸರು | ಪ್ರಸನ್ನ ದೇವಾಡಿಗ |
| ತಂದೆಯ ಹೆಸರು | ದಿಃ ಭಾಸ್ಕರ |
| ವಯಸ್ಸು | 37 ವರ್ಷ |
| ಉದ್ಯೋಗ | ಪಿಸಿ ನಂಬ್ರ 1242, ಲೋಕಾಯುಕ್ತ ಪೊಲೀಸ್ ಠಾಣೆ, ಉಡುಪಿ |
| ವಿಳಾಸ | ಉಡುಪಿ |

ದಿನಾಂಕಃ 04-04-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

1) ನಾನು ದಿನಾಂಕ 01-07-2016 ರಿಂದ 06-10-2022 ರವರೆಗೆ ಉಡುಪಿಯ ಭ್ರಷ್ಟಾಚಾರ ನಿಗ್ರಹದಳದಲ್ಲಿ, ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 07-10-2022 ರಿಂದ ಉಡುಪಿಯ ಲೋಕಾಯುಕ್ತ ಶಾಖೆಯ ಅಡಿಯಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ.

2) ದಿನಾಂಕ 16-03-2019 ರಂದು ಚಾಸಾ -1 ಕೊಟ್ಟ ದೂರಿನಂತೆ ನಮ್ಮ ಠಾಣೆಯ ಗುನ್ನೆ ನಂಬ್ರ 3/19 ದಾಖಲಾಗಿದ್ದು ಅದಕ್ಕಾಗಿ ದಿನಾಂಕ 16-03-2019 ರಂದು ತನಿಖಾಧಿಕಾರಿ ಸೂಚಿಸಿದಂತೆ ಚಾ.ಸಾ. 4 ಮತ್ತು 5 ಇವರ ಸಮಕ್ಷಮ ಪ್ರಾಯೋಗಿಕ ಪಂಚನಾಮೆ ನಿಶಾನೆ ಪಿ-2 ನ್ನು ನಾನು ಅದನ್ನು ಕಂಪ್ಯೂಟರ್ ನಲ್ಲಿ ದಾಖಲಿಸಿದ್ದೆ. ಆ ಸಮಯ ನಾನು ಸೋಡಿಯಂ ಕಾರ್ಬೊನೇಟ್ ತಯಾರಿಸಿ ನೀಡಿದ್ದೆ. ಅದೇ ದಿನ .ಪಿ 2 ರನಂತರ ತನಿಖಾಧಿಕಾರಿಗಳ ಸೂಚನೆಯಂತೆ ಮಣಿಪಾಲದ ಆರ್ ಟಿ ಒ ಕಚೇರಿಗೆ ಹೋಗಿರುತ್ತೇವೆ. ಚಾ.ಸಾ.1 ಮತ್ತು 4 ಇವರು ಆ.ಸ.ನೌಕರರ ಕಚೇರಿಯ ಒಳಗೆ ಹೋಗಿದ್ದರು. ಸ್ವಲ್ಪ ಸಮಯದ ನಂತರ ಅ.ಸ.ನೌಕರರು ಲಂಚ ಪಡೆದಿರುವುದಾಗಿ ಸೂಚನೆಯನ್ನು ನೀಡಿದ್ದರು. ಆಗ ನಾವು ತನಿಖಾಧಿಕಾರಿಯವರ ಸೂಚನೆಯಂತೆ ಕಚೇರಿಯ ಒಳಗೆ ಹೋಗಿದ್ದೇವು. ಟ್ರ್ಯಾಪ್ ಸಮಯದಲ್ಲಿ ಅಧಿಕಾರಿಯ ಸೂಚನೆಯಂತೆ ಸೋಡಿಯಂ ಕಾರ್ಬೋನೇಟ್

ಧ್ರಾವಣ ತಯಾರಿಸಿ ನೀಡಿದ್ದೇವು. ಆ ಸಮಯದಲ್ಲಿ ಫಿಶಯಾದಿದಾರರು ನೀಡಿದ್ದ ವೈಯ್ಸು ರೆಕಾರ್ಡ್ರ್ನನ್ನು ಪಡೆದು ತನಿಖಾಧಿಕಾರಿಗಳ ಸೂಚನೆಯಂತೆ ಲ್ಯಾಪ್ ಟಾಪ್ ಗೆ ಅಳವಡಿಸಿಕೊಂಡು ವೈಸ್ ರೆಕಾರ್ಡರ್ ನಲ್ಲಿದ್ದ ಸಂಭಾಷಣೆಯನ್ನು ಸಿ.ಡಿಗೆ ಅಳವಡಿಸಿಕೊಂಡಿದ್ದೆ. ಷದ್ರಿ ಸಿ.ಡಿ ಈಗಾಗಲೇ ಎಮ್ ಒ 19 ಎಂದು ಗುರುತಿಸಲಾಗಿದೆ. ಆಗ ತಯಾರಿಸಿದ ಟ್ರ್ಯಾಪ್ ಪಂಚನಾಮೆಗೆ ನಿ.ಪಿ 4 ಕ್ಕೆ ನಾನು ಸಹಿ ಮಾಡಿದ್ದೆ. ನಿ.ಪಿ 4 ರಲ್ಲಿರುವ ನನ್ನ ಸಹಿಯನ್ನು ನಿ.ಪಿ 4(ಡಿ) ಎಂದು ಗುರುತಿಸಿದೆನು.

3) ಆದಿನ ಟ್ರಾಪ್ ಮಾಡಿ ಹಿಡಿದಿದ್ದ ಆರೋಪಿಗಳನ್ನು ಈ ನ್ಯಾಯಾಲಯದಲ್ಲಿ ಗುರುತಿಸಿದ್ದೇನೆ. ಆ ದಿನ ಸಿ.ಡಿಗೆ ವೈಯ್ಸು ರೆಕಾರ್ಡರನಿಂದ ಲ್ಯಾಪ್ ಟಾಪ ಮೂಲಕ ದಾಖಲಿಸಿದ್ದಕ್ಕಾಗಿ ಅಧಿಕಾರಿಗಳಿಗೆ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65(ಬಿ) ಪ್ರಮಾಣಪತ್ರವನ್ನು ಸಹ ನೀಡಿದ್ದೇನೆ. ಈಗ ಅವುಗಳನ್ನು ನೋಡಿ ನಿಶಾನೆ ಪಿ-31 ಅವುಗಳಲ್ಲಿರುವ ನನ್ನ ಸಹಿ ನಿಶಾನೆ ಪಿ-31(ಎ) ಎಂದು ಗುರುತಿಸಿದ್ದೇನೆ.

4) ತಾರೀಕು 06-05-2019 ರಂದು ತನಿಖಾಧಿಕಾರಿಯ ಸೂಚನೆಯಂತೆ ಚಾ.ಸಾ. 4 ಮತ್ತು 5 ರ ಸಮಕ್ಷಮ 1 ನೇ ಆರೋಪಿತನ ಮಾದರಿ ಕೋರಿಕೆಯ ಧ್ವನಿಯನ್ನು ಸಂಗ್ರಹಿಸಲಾಗಿದ್ದು ಅದಕ್ಕಾಗಿ ನಿ.ಪಿ 12 ರ ಪಂಚನಾಮೆಯನ್ನು ಬರೆದಿತ್ತು. ಆಗ ನಾನು ಸಹ ಪಂಚನಾಮೆಗೆ ಸಹಿ ಮಾಡಿದ್ದು, ಷದ್ರಿ ಸಹಿಯನ್ನು ನಿ.ಪಿ 12(ಬಿ) ಎಂದು ಗುರುತಿಸಿದ್ದೇನೆ. ಆ ಸಮಯದಲ್ಲಿ ತೆಗೆದಿದ್ದ ಫೋಟೋಗಳನ್ನು ಈಗಾಗಲೇ ನಿ.ಪಿ 13 ಎಂದು 4 ಫೋಟೋಗಳನ್ನು ಗುರುತಿಸಲಾಗಿದೆ.

5) ದಿನಾಂಕ 17-05-2019 ರಂದು ಚಾ.ಸಾ.4 ಮತ್ತು 5 ಇವರ ಸಮಕ್ಷಮ 2 ನೇ ಆರೋಪಿತನ ಮಾದರಿ ಲೋರಿಕೆಯ ಧ್ವನಿಯನ್ನು ಸಂಗ್ರಹಿಸಿತ್ತು. ಅದಕ್ಕಾಗಿ ಬರೆದ ಪಂಚನಾಮೆ ನಿ.ಪಿ 17 ಆಗಿದ್ದು, ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿದ್ದು ನಿ.ಪಿ 17 (ಬಿ) ಎಂದು ಗುರುತಿಸಿದ್ದೇನೆ. ಆಗ ನಾನು ತೆಗೆದಿದ್ದ ಫೋಟೊಗಳನ್ನು ನಿ.ಪಿ 18 ಎಂದು ಗುರುತಿಸಿದೆ. ಅದೇ ದಿನಾಂಕದಂದುದ ಟ್ರ್ಯಾಪ್ ಸಮಯದಲ್ಲಿ ಜಪ್ತು ಮಾಡಿದ ಡಿವಿಆರ್ ನಲ್ಲಿಯ ವಿಡಿಯೋವನ್ನು ಸಿ.ಡಿಗೆ ವರ್ಗಾಯಿಸಿರುತ್ತಾರೆ. ಆ ಸಮಯದಲ್ಲಿ ನಾನು ಫೋಟೋ ತೆಗೆದಿದ್ದೆ. ಆಗ ಬರೆದಿದ್ದ ಪಂಚನಾಮೆ ನಿ.ಪಿ 19, ಅದರಲ್ಲಿರುವ ನನ್ನ ಸಹಿ ನಿ.ಪಿ 19(ಬಿ) ಎಂದು ಗುರುತಿಸಿದೆನು. ಆ ದಿನ ತೆಗೆದಿದ್ದ ಫೋಟೋಗಳನ್ನು ಈಗಾಲೆ ನಿ.ಪಿ 20 ಎಂದು ಗುರುತಿಸಲಾಗಿದೆ. ಅದಕ್ಕಾಗಿ ಕೊಟ್ಟ ಸಾಕ್ಷ್ಯ ಅಧಿನಿಯಮದ ಕಲಂ 65(ಬಿ)

ಪ್ರಮಾಣಪತ್ರವನ್ನು ಈಗ ನೋಡಿ ಅದನ್ನು ನಿ.ಪಿ 32 ಮತ್ತು ನಿ.ಪಿ 33 ಎಂದು ಗುರುತಿಸಿದೆ. ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ 32(ಎ) ಮತ್ತು ನಿ.ಪಿ 33(ಎ) ಎಂದು ಗುರುತಿಸಿದೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಎ.ಬಿ.ಹೆಚ್ ವಕೀಲರಿಂದಃ ಈ ಸಾಕ್ಷಿಯ ಪಾಟೀಸವಾಲನ್ನು ತನಿಖಾಧಿಕಾರಿಯ ಪಾಟೀ ಸವಾಲಿನ ನಂತರ ಮಾಡಲು ಅವಕಾಶ ಕಕೋರಿರುತ್ತಾರೆ ಆದ್ದರಿಂದ ಮುಂದೂಡಲಾಗಿದೆ.**

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್. ಗಂಗಣ್ಣವರ್)
ಸತ್ರ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು
ಉಡುಪಿ